ಕರ್ನಾಟಕ ವಿಧಾನ ಸಭೆ

KARNATAKA LEGISLATIVE COUNCIL

ಸೋಮವಾರ ೧೪ನೇ ಮಾರ್ಚಿ ೧೯೮೩/ಫಾಲ್ಗುಣ ೨೩, ೧೯೦೫.

ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಸದನವು ಬೆಳಿಗ್ಗೆ ೧೧–೦೦ ಗಂಟೆಗೆ ಸಮಾವೇಶಗೊಂಡಿತು.

ಉಪಾಧ್ಯಕ್ಷ (ಶ್ರೀ ವೀರಣ್ಣ) ಅವರು ಪೀಠವನ್ನಲಂಕರಿಸಿದ್ದರು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಕೊಡಲಾದ ಬಾಯಿ ಮಾತಿನ ಉತ್ತರಗಳು.

ಉಪಾಧ್ಯಕ್ಷರು.—ಈಗ ಬಾಯಿ ಮಾತಿನ ಮೂಲಕ ಉತ್ತರಿಸುವ ಪ್ರಶ್ನೆಗಳು.

ಪ್ರಶ್ನೆ ಸಂಖ್ಯೆ ೨೩.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಯವರು ನೀರಾ ಸರಬರಾಜಿಗೆ ಸಂಬಂಧಪಟ್ಟಂಥ ಒಂದು ಕಾರ್ಯಕ್ರಮದಲ್ಲಿ ಭಾಗವಹಿಸಲು ಹೋಗಿರುವುದರಿಂದ ಇಂದಿನ ಸಭೆಗೆ ಅವರು ಬರಲು ಸಾಧ್ಯವಾಗುವುದಿಲ್ಲ. ಆದ್ದರಿಂದ ದಯವಿಟ್ಟು ೨೩, ಪ್ರಶ್ನೆಯನ್ನು ಮುಂದೂಡಬೇಕೆಂದು ಕೋರುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಉಪಾಧ್ಯಕ್ಷರೆ, ಟ್ರೆಜರಿ ಬೆಂಚನ್ನು ತಾವು ನೋಡಿದರೆ ಗೊತ್ತಾಗುತ್ತದೆ. ಎಲ್ಲ ಆಸನಗಳೂ ಖಾಲಿ ಇವೆ. ಸದನದ ಕಾರ್ಯಕಲಾಪಗಳು ನಡೆಯುವಾಗ ಮಾನ್ಯ ಸಚಿವರುಗಳು ಎಲ್ಲೂ ಹೊರಗಡೆ ಹೋಗಬಾರದೆಂದು ಇದೆ. ಏಕೆಂದರೆ ಎಲ್ಲಕ್ಕಿಂತಲೂ ಮುಖ್ಯವಾದುದು ಎಂದರೆ ಈ ಸದನ.....

ಶ್ರೀ ಎ. ಲಕ್ಷ್ಮೀಸಾಗರ್.—ಹಾಗಾದರೆ ನಾನೂ ಎಕ್ಸ್‌ಪ್ಲೈನ್ ಮಾಡಲೆ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಉತ್ತರ ಕೊಡಬೇಕಾದ ಸಂಬಂಧಪಟ್ಟ ಮಂತ್ರಿಗಳೇ ಸದನದಲ್ಲಿಲ್ಲದಿದ್ದರೆ ಬೇರೆ ಯಾರು ಉತ್ತರ ಕೊಡುವುದಕ್ಕೆ ಸಾಧ್ಯವಾಗುತ್ತದೆ ? ಮುಖ್ಯ ಮಂತ್ರಿಯವರು ತಮಗೇ ನಾದರೂ ಪತ್ರವನ್ನು ಬರೆದಿದ್ದಾರೆಯೆ ?

ಶ್ರೀ ಎನ್. ಚಿಕ್ಕೇಗೌಡ.—ಈ ಸದನ ಎಲ್ಲಕ್ಕಿಂತ ಮುಖ್ಯವಾದದ್ದು. ಟ್ರೆಜರಿ ಬೆಂಚ್‌ನವರು ಈ ಸಂದರ್ಭದಲ್ಲಿ ಹಾಜರಿದ್ದು ಸದಸ್ಯರ ಪ್ರಶ್ನೆಗಳಿಗೆ ಉತ್ತರ ಕೊಡಬೇಕಾದ್ದು ಅವರ ಜವಾಬ್ದಾರಿ. ಆದರೆ ಸದನ ನಡೆಯುವಾಗ ಈ ರೀತಿ ಹೊರಗಡೆ ಹೋಗುವುದಾದರೆ ಈ ಸದನಕ್ಕೆ ಅಗೌರವ ಮಾಡಿದಂತಾಗುತ್ತದೆ. ನಾವೂ ಕೂಡ ಇದೇ ರೀತಿ ಪತ್ರವನ್ನು ತಮಗೆ ಬರೆಯಬಹುದಲ್ಲವೆ ? ಮಾನ್ಯ ಸಚಿವರಾದ ಲಕ್ಷ್ಮೀಸಾಗರ್‌ರವರಿಗೂ ಗೊತ್ತಿದೆ. ಹಿಂದೆಯೂ ಕೂಡ ಈ ಸದನ ನಡೆಯುವಾಗ ಇದೇ ರೀತಿ ಆಗುತ್ತಿತ್ತು.....

ಶ್ರೀ ಎ. ಲಕ್ಷ್ಮೀಸಾಗರ್.—ಡ್ಯಾನಿಷ್ ಸರ್ಕಾರದವರು ನಮ್ಮ ರಾಜ್ಯಕ್ಕೆ ಕೊಳವೆ ನೀರನ್ನು ಎತ್ತುವ ಯಂತ್ರಗಳನ್ನು ಕೊಟ್ಟಿದ್ದಾರೆ. ಅದನ್ನು ರಿಸೀವ್ ಮಾಡಿಕೊಳ್ಳಲು ಮತ್ತು ಬೆಂಗಳೂರಿನ ಬಳಿ ಇರುವ ಕನಕಪುರದ ಹತ್ತಿರ ನಡೆಯುವ ಸಮಾರಂಭಕ್ಕೆ ಹೋಗಿದ್ದಾರೆ...

ಶ್ರೀ ಎನ್. ಚಿಕ್ಕೇಗೌಡ.—ಆ ವಿಷಯ ನಮಗೂ ಗೊತ್ತಿದೆ. ಅದು ಇದ್ದುದು ಇವತ್ತು ಬೆಳಿಗ್ಗೆ ೯-೩೦ ಗಂಟೆಗೆ...

ಉಪಾಧ್ಯಕ್ಷರು.—ಈ ವಿಷಯನ್ನೇ ಪ್ರಶ್ನೆಯನ್ನು ತಡೆಹಿಡಿದಿದ್ದೇನೆ.

(ಈ ಸಮಯದಲ್ಲಿ ಮಾನ್ಯ ಸದಸ್ಯರಾದ ನಾರಾಯಣಕುಮಾರ್‌ರವರು ವೃತ್ತು ಒಬ್ಬ ಹೆಂಗಸು ಸದನದ ಒಳಕ್ಕೆ ಬಂದರು).

ಶ್ರೀ ಜಿ. ನಾರಾಯಣಕುಮಾರ್.—ಮಾನ್ಯ ಉಪಾಧ್ಯಕ್ಷರೇ ಮೊನ್ನೆ ಶುಕ್ರವಾರ ಹಾಡುಹಗಲಿನಲ್ಲಿ ಲಾಲ್‌ಬಾಗ್‌ನಲ್ಲಿ ಅತ್ಯಾಚಾರಕ್ಕೆ ಒಳಗಾದ ಹೆಂಗಸು ಇವರು.....

ಶ್ರೀ ಎ. ಲಕ್ಷ್ಮೀಸಾಗರ್,—ಇದು ಅಕ್ರಮವಾದದ್ದು, ಇದು ಸರಿಯಾದುದಲ್ಲ.

(ಗೊಂದಲ)

SRI N. HUTCHAMASTHI GOWDA.—This is not the way in which the Hon'ble Member should behave.....

MR. DEPUTY SPEAKER.—Order ! Order ! I order the Marshal.....

ಶ್ರೀ ಧರ್ಮಸಿಂಗ್.—ಮಾನ್ಯ ಉಪಾಧ್ಯಕ್ಷರೇ ನಮ್ಮ ಕರ್ನಾಟಕ ಇತಿಹಾಸದಲ್ಲಿ ಈ ರೀತಿ ಸದನದೊಳಕ್ಕೆ ಸದಸ್ಯರಲ್ಲದವರನ್ನು ಕರೆತರುತ್ತಿರುವುದು ಇದೇ ಮೊದಲಸಾರಿ. ಏನು ಇದ್ದರೂ ಅದು ಹೊರಗಡೆ ಆಗಬೇಕೇ ವಿನಹ ಸದನದ ಒಳಗಡೆ ಆಗಬಾರದು.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರಾದ ಶ್ರೀ ಧರ್ಮಸಿಂಗ್‌ರವರು ಹೇಳಿದ್ದು ಸರಿ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಈ ರೀತಿ ಆಗಬಾರದಿತ್ತು. ಈ ರೀತಿ ನಡೆಯಲು ಇನ್ನು ಮುಂದೆ ಬಿಡುವುದಿಲ್ಲ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್.—ತಮ್ಮ ಕಾಲದಲ್ಲಿ ಇದೆಲ್ಲಾ ಆಗುತ್ತಿದೆ.

(ಗೊಂದಲ)

(ಅಧ್ಯಕ್ಷರ ಅಪ್ಪಣೆ ಮೇರೆಗೆ ಮಾರ್ಷಲ್‌ರವರು ಆ ಹೆಂಗಸನ್ನು ಹೊರಕ್ಕೆ ಕರೆದೊಯ್ದರು)

ಶ್ರೀ ಧರ್ಮಸಿಂಗ್.—ಚೀಫ್ ವಿಪ್ ಏನು ಮಾಡುತ್ತಿದ್ದಾರೋ ಗೊತ್ತಿಲ್ಲ.

ಶ್ರೀ ಜಿ. ನಾರಾಯಣಕುಮಾರ್.—ನಮ್ಮ ಮನೆಯಲ್ಲೂ ಹೆಣ್ಣುಮಕ್ಕಳು ಇದ್ದಾರೆ. ನಿಮ್ಮ ಮನೆಯಲ್ಲೂ ಹೆಣ್ಣು ಮಕ್ಕಳಿದ್ದಾರೆ. ಈ ರೀತಿ ಹಾಡು ಹಗಲಲ್ಲಿ ಅತ್ಯಾಚಾರ ನಡೆಯುತ್ತಿದ್ದರೆ ನಮ್ಮನ್ನೆ ನೋಡಿಕೊಂಡು ಕುಳಿತಿರುವುದೇ ?

ಉಪಾಧ್ಯಕ್ಷರು.—ಇದು ಪ್ರಶ್ನೋತ್ತರ ಕಾಲ. ಮಾನ್ಯ ಸದಸ್ಯರು ಸಭೆಯ ನೀತಿನಿಯಮಗಳಿಗೆ ಅನುಸಾರವಾಗಿ ನಡೆಯಬೇಕು. ಈ ರೀತಿಯ ವರ್ತನೆ ಸರಿಯಲ್ಲ.

ಶ್ರೀ ಜಿ. ನಾರಾಯಣಕುಮಾರ್.—ಮಧ್ಯಾಹ್ನವೇ ಈ ರೀತಿಯ ಅತ್ಯಾಚಾರ ನಡೆದಿದೆ.....

SRI M. VEERAPPA MOILY.—This incident of bringing an Outsider has happened on the floor of the House. This is un-precedented. Everyone has to bow down his head in shame.

ಮಾನ್ಯ ಉಪಸಭಾಪತಿಗಳೇ ಈ ರೀತಿ ಸದನದಲ್ಲಿ ಯಾವಾಗಲೂ ನಡೆದಿರಲಿಲ್ಲ. ಈ ರೀತಿ ಅಲಕ್ಷತನದಿಂದ ಸಭೆಯನ್ನು ನಡೆಸಬಾರದು. ಹೊರಗಡೆ ಗೊಂದಲವಾಗಿರತಕ್ಕಂಥದ್ದನ್ನು ಸದನದ ಒಳಗಡೆ ತರತಕ್ಕಂಥದ್ದು ಸಂಸತ್ತಿಗೆ ಅಪಮಾನ ಮಾಡಿದಂತಾಗುತ್ತದೆ. ಇದರಿಂದ ಮುಂದಿನ ನಡವಳಿಕೆಗಳನ್ನು ನಡೆಸುವುದಕ್ಕೆ ಆಗುವುದಿಲ್ಲ. ಇಷ್ಟು ಹೀನಾಯವಾಗಿ ಸಭೆಯನ್ನು ನಡೆಸುವುದಾದರೆ ಸದನದ ಘನತೆ ಗೌರವಗಳನ್ನು ಕಾಪಾಡಿದಂತಾಗುವುದಿಲ್ಲ.

ಶ್ರೀ ಜಿ. ನಾರಾಯಣಕುಮಾರ್.—ಕನ್ನಡ ನಾಡಿನ ಸ್ತ್ರೀಯೊಬ್ಬಳ ಮೇಲೆ ಆಗಿರತಕ್ಕಂಥ ಅಪಮಾನ ಇಡೀ ಕರ್ನಾಟಕ ಸ್ತ್ರೀಯರಿಗೆ ಅವಮಾನವಾದಂತಾಗಿರುತ್ತದೆ. ಇದನ್ನು ನಾನು ಪ್ರತಿಭಟಿಸುತ್ತೇನೆ.

ಉಪಾಧ್ಯಕ್ಷರು.—ಶ್ರೀ ಜಿ. ನಾರಾಯಣಕುಮಾರ್‌ರವರು ಸಭೆಗೆ ಅಗೌರವ ತರತಕ್ಕಂಥ ಕೆಲಸವನ್ನು ಮಾಡಿರುತ್ತಾರೆ. ಆದ್ದರಿಂದ ಅವರು ಕ್ಷಮಾಪಣೆಯನ್ನು ಕೇಳಿಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಜಿ. ನಾರಾಯಣಕುಮಾರ್.—ಮೂರು ಜನ ಒಬ್ಬ ಕೂಲಿ ಹೆಂಗಸಿನ ಮೇಲೆ ಅತ್ಯಾಚಾರ ಮಾಡಿದ್ದಾರೆ. ಅವರಿಗೆ ರಕ್ಷಣೆ ಕೊಡಬೇಕೆಂದು ನಾನು ಕೇಳುತ್ತಿದ್ದೇನೆ. ಅದು ಅಪರಾಧವೇ ?

(ಗೊಂದಲ)

ಒಬ್ಬ ಮಾನ್ಯ ಸದಸ್ಯರು.—ರಕ್ಷಣೆಯನ್ನು ಕೊಡುವುದಕ್ಕೆ ಪೋಲೀಸ್ ಇಲಾಖೆ ಇರುತ್ತದೆ ಅವರು ರಕ್ಷಣೆಯನ್ನು ಕೊಡುತ್ತಾರೆ. ಆದರೆ ಸದನದಲ್ಲಿ ಈ ರೀತಿ ನಡೆದುಕೊಂಡು ಸದನಕ್ಕೆ ಅಗೌರವವನ್ನು ತರತಕ್ಕಂಥದ್ದು ಸೂಕ್ತವಲ್ಲ.

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೇ, ಆಡಳಿತದಲ್ಲಿರತಕ್ಕಂಥವರು ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಆಗುತ್ತದೋ ಇಲ್ಲವೋ ಹೇಳಬೇಕು.

ಶ್ರೀ ಜಿ. ನಾರಾಯಣಕುಮಾರ್.—ನೀವು ಹರಿಶ್ಚಂದ್ರರು ನೋಡಿ.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ಈವತ್ತಿನದಿವಸ ಮಾನ್ಯ ಸದಸ್ಯರಾದ ಶ್ರೀ ನಾರಾಯಣಕುಮಾರ್‌ರವರು ಮಾಡಿರತಕ್ಕಂಥ ಕೆಲಸ ಸರಿಯಾದುದಲ್ಲವೆಂದು ನಾನು ಒಪ್ಪಿಕೊಳ್ಳುತ್ತೇನೆ. ಹೀಗೆ ಅವರು ಮಾಡಬಾರದಾಗಿತ್ತು. ಯಾವ ವಿಷಯವನ್ನು ಸಭೆಯಲ್ಲಿ ಪ್ರಸ್ತಾಪ ಮಾಡಬೇಕಾದರೂ ಅದಕ್ಕೆ ನಿಯಮಾವಳಿಗಳು ಇರುತ್ತವೆ. ಎಂಥ ಜ್ವಲಂತ ಪ್ರಶ್ನೆಗಳು ಇದ್ದರೂ ಸಹ ಸಭೆಯ ನಿಯಮಾವಳಿ ಪ್ರಕಾರವೇ ನಡೆಯಬೇಕು.

ಶ್ರೀ ಎನ್. ಚಿಕ್ಕೇಗೌಡ.—ಮಾನ್ಯ ಸದಸ್ಯರುಗಳು ತಾವು ಮಾತನಾಡುತ್ತಿದ್ದರೂ ಕೂಡ ಎದ್ದು ನಿಂತೇ ಇರುತ್ತಾರೆ.

(ಗೊಂದಲ)

SRI A. LAKSHMISAGAR.—I am on my legs. ನಾನು ನಿಂತೇ ಇದ್ದೇನೆ. ಮಾನ್ಯ ಉಪಾಧ್ಯಕ್ಷರೇ ಯಾವ ವಿಚಾರವಾಗಲಿ, ಎಷ್ಟೇ ತೀವ್ರತರವಾದ ವಿಚಾರವಾಗಲಿ ಮಾನ್ಯ ಸದಸ್ಯರು ಸಭೆಯ ನಿಯಮಾವಳಿಗನುಸಾರವಾಗಿ ವಿಷಯಗಳನ್ನು ಪ್ರಸ್ತಾಪ ಮಾಡಬೇಕೇ ವಿನಹ ತಮ್ಮ ಮನಸ್ಸಿಗೆ ತೋರಿದ ರೀತಿಯಲ್ಲಿ ನಡೆದುಕೊಳ್ಳುವುದಕ್ಕೆ ಸಾಧ್ಯವೇ ಇಲ್ಲ. ಯಾವುದೇ ವಿಚಾರಗಳನ್ನು ಪ್ರಸ್ತಾಪ ಮಾಡಲಂ ನಿಯಮಾವಳಿಗಳನ್ನು ನೋಡಿದರೆ ಗೊತ್ತಾಗುತ್ತದೆ. ಮಾನ್ಯ ಸದಸ್ಯರಾದಂಥ ಶ್ರೀ ನಾರಾಯಣಕುಮಾರ್‌ರವರು ಮಾಡಿರತಕ್ಕಂಥದ್ದು ಅಕ್ಷಮ್ಯ ಅಪರಾಧವೆಂದು ಹೇಳುವುದಕ್ಕೆ ನಾನು ಈ ಸಂದರ್ಭದಲ್ಲಿ ಇಚ್ಛಿಪಡುತ್ತೇನೆ. ಮಾನ್ಯ ವಿರೋಧಪಕ್ಷದ ನಾಯಕರಾದ ಮಾನ್ಯ ವೀರಪ್ಪ ಮೊಯಿಲಿಯವರು ಹೇಳಿದಂತೆ ಇದು ಈ ಮನೆಗೆ ಗೌರವ ತರತಕ್ಕಂಥದ್ದಲ್ಲ. ಈ ಸಭೆಯ ಗೌರವ ಘನತೆಯನ್ನು ಕಾಪಾಡತಕ್ಕಂಥದ್ದು ಪ್ರತಿಯೊಬ್ಬರ ಕರ್ತವ್ಯ. ಪ್ರತಿಯೊಬ್ಬರೂ ಸಹಕಾರ ಮಾಡಬೇಕು. ಸಭೆಯ ಗೌರವ ಘನತೆಯನ್ನು ಎಲ್ಲರೂ ರಕ್ಷಣೆ ಮಾಡುವುದರ ಬಗ್ಗೆ ಯಾವುದೇ ವಾದ ವಿವಾದವಿಲ್ಲ. ಇದು ನಿರ್ವಿವಾದ ವಾದ ವಿಚಾರ. ಆದ್ದರಿಂದ ಎಷ್ಟೇ ತೊಂದರೆಯಾದ ಪ್ರಸಂಗವಿದ್ದರೂ, ಎಷ್ಟೇ ಕಠಿಣವಾದ ಪ್ರಸಂಗವಿದ್ದರೂ, ಎಷ್ಟೇ ತೀವ್ರತರವಾದ ಪ್ರಶ್ನೆ ಇದ್ದರೂ ಕೂಡ ಅದನ್ನು ನಿಯಮಾವಳಿಗಳಿಗೆ ಅನುಗುಣವಾಗಿ ಅದರ ವ್ಯಾಪ್ತಿಯೊಳಗೆ ಬರುವಂತೆ ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಸಾಧ್ಯವೇ ಹೊರತು ಬೇರೆ ವಿಧದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಮತ್ತೆ ಆ ವ್ಯಕ್ತಿ ನಮ್ಮ ವಾಚ್ ಅಂಡ್ ವಾರ್ಡ್ ಮರೆಸಿ ಬಂದುದು ಹೇಗೆ ಎಂಬುದರ ಬಗ್ಗೆಯೂ ತೀವ್ರರೀತಿಯಲ್ಲಿ ಕ್ರಮ ಕೈಗೊಳ್ಳ

ಬೇಕಾಗುತ್ತದೆ. ಇನ್ನು ಮುಂದೆ ಈ ರೀತಿ ಆಗದಂತೆಯೂ ನೋಡಿಕೊಳ್ಳುವುದಾಗಿ ತಮ್ಮಲ್ಲಿ ಕೇಳಿ ಕೊಳ್ಳುವುದಕ್ಕೆ ಇಚ್ಛೆಪಡುತ್ತೇನೆ.

(ಗೊಂದಲ)

ಶ್ರೀ ಜೆ. ನಾರಾಯಣಕುಮಾರ್.—ನಾನು ದಯವಿಟ್ಟು . ಹೇಳುತ್ತೇನೆ, ಯಾರೂ ಮಾಡದೆ ಇರತಕ್ಕಂಥ ಅಪರಾಧವನ್ನು ನಾನು ಮಾಡಿಲ್ಲ.

(ಗೊಂದಲ)

ಉಪಾಧ್ಯಕ್ಷರು.—ಮಾನ್ಯ ಸದಸ್ಯರಾದ ನಾರಾಯಣಕುಮಾರ್‌ರವರು ಕ್ಷಮಾಪಣೆ ಕೇಳಿಕೊಳ್ಳಬೇಕು ; ಇಲ್ಲವಾದರೆ ಸಭೆಯ ನಿಯಮಾವಳಿ ಪ್ರಕಾರ ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕೋ ಆ ರೀತಿ ಮುಂದಿನ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆಂದು ಹೇಳುತ್ತೇನೆ.

ಶ್ರೀ ಜಿ. ನಾರಾಯಣಕುಮಾರ್.—ನಾನು ಮಾಡಿದ ಕೃತ್ಯಕ್ಕೆ ಸಭೆಯನ್ನು ಕ್ಷಮಾಪಣೆ ಕೇಳಿ ಕೊಳ್ಳುತ್ತೇನೆ.

ಶ್ರೀ ಗೋವಿಂದ ಪಿ. ಒಡೆಯರ್.—ಸ್ವಾಮಿ, ಇದು ಬಹಳ ಮಹತ್ವದ ಪ್ರಶ್ನೆಯಾದ ಕಾರಣ ಮುಖ್ಯಮಂತ್ರಿಗಳು ಬರುವವರೆಗೆ ಇದನ್ನು ತಡೆಹಿಡಿಯುವುದು ಒಳ್ಳೆಯದು. ಇದರಿಂದ ಈ ಸದನಕ್ಕೂ ಒಳ್ಳೆಯದಾಗುತ್ತದೆ, ನಮಗೂ ಒಳ್ಳೆಯದಾಗುತ್ತದೆ ಮತ್ತು ಇತರರಿಗೂ ಒಳ್ಳೆಯದಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಸ್ವಾಮಿ, ಮುಖ್ಯಮಂತ್ರಿಗಳೇ ಇದಕ್ಕೆ ಉತ್ತರ ಕೊಡಬೇಕೆಂದು ಈ ಸಭೆ ಅಭಿಪ್ರಾಯ ಪಡುವುದಾದರೆ ನನ್ನ ಅಭ್ಯಂತರವೇನೂ ಇಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ —ನಮಗೆ ಈ ಪ್ರಶ್ನೆಗೆ ಉತ್ತರ ಬೇಕಾಗಿದೆ. ಆದ್ದರಿಂದ ಮಾನ್ಯ ಮಂತ್ರಿಗಳು ಉತ್ತರ ಕೊಡುವುದಿದ್ದರೆ ಕೊಡಲಿ.

ಉಪಾಧ್ಯಕ್ಷರು.—ಈಗ ಶ್ರೀ ಬಾಪೂಗೌಡರು ೨ಳನೇ ಸಂಖ್ಯೆಯ ಪ್ರಶ್ನೆ ಕೇಳಬಹುದು.

ಹೈದರಾಬಾದ್-ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ

ಪ್ರಶ್ನೆ ನಂ. ೨೪

ಶ್ರೀ ಬಾಪೂಗೌಡ ದಾರನಾ ಪೂರ (ಶಹಪುರ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಿಗೆ ಕಂಡ ಪ್ರಶ್ನೆಗಳನ್ನು ಉತ್ತರಿಸುವರೇ ?

ಅ) ಸರ್ಕಾರವು ಹೈದರಾಬಾದ್-ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಲಿಯನ್ನು ಸ್ಥಾಪಿಸಿದೆಯೇ ?

ಆ) ಹಾಗಾದರೆ, ಯಾವಾಗ;

ಇ) ವಿಭಾಗಾಧಿಕಾರಿ ಮತ್ತು ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಈ ಪ್ರದೇಶವನ್ನು ಅಭಿವೃದ್ಧಿಪಡಿಸಲು ಈ ದೇಶದಲ್ಲಿರುವ ಇಂತಹ ಮಂಡಳಿಗಳಿಗೆ ಭೇಟಿಕೊಟ್ಟು ಬೇಕಾದ ಕ್ರಮಗಳನ್ನು ತೆಗೆದುಕೊಳ್ಳುವ ಬಗ್ಗೆ ವರದಿ ಮಾಡಲು ಸಮಿತಿಯನ್ನು ನೇಮಿಸಿರುವುದರ ವಾಸ್ತವವಲ್ಲವೆ ?

ಈ) ಆ ಸಮಿತಿಯು ವರದಿಯನ್ನು ಮಾಡಿದೆಯೇ ? ಹಾಗಾದರೆ ಅದರ ಶಿಫಾರಸ್ಸುಗಳು ಮತ್ತು ಅವನ್ನು ಜಾರಿಗೊಳಿಸಲು ಸರಕಾರವು ಏನು ಕ್ರಮವನ್ನು ತೆಗೆದುಕೊಂಡಿದೆ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಮಾನ್ಯ ಮುಖ್ಯಮಂತ್ರಿಗಳು

ಅ) ಇಲ್ಲ.